# ವಚನ ಮಾರ್ಗ

ಪ್ರಧಾನ ಸಂಪಾದಕರು

ಡಾ. ಶಿವಮೂರ್ತಿ ಮುರುಘಾ ಶರಣರು



ಸಂಪಾದಕರು

ಪ್ರೊ. ಎಸ್.ಜಿ. ಸಿದ್ದರಾಮಯ್ಯ

ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ

ಡಾ. ಸಿ.ಟಿ. ಜಯಣ್ಣ

**VACHANAGALU :** Published by Allamaprabhu Research Center, Sri Jagadguru Murugharajendra Granthamale, Sri Murugha Math, Chitradurga 577502, Ph : 08194 222250.

Chief Editor
**Dr. Shivamurthy Murugha Sharanaru**

Editor
**Prof. S.G. Siddaramaiah**
**Dr. G.N. Mallikarjunappa**
**Dr. C.T. Jayanna**

First Impression : 2017

Pages : xviii + 784

© : Publisher

Price : Rs.1000/-

Paper used : 60 GSM NS Special light weight

DTP : Rajeev Reddy

Cover page : S. Manjunath

ವಚನಗಳು
ಪ್ರಧಾನ ಸಂಪಾದಕರು
ಡಾ. ಶಿವಮೂರ್ತಿ ಮುರುಘಾಶರಣರು

ಸಂಪಾದಕರು
ಪ್ರೊ. ಜಿ.ಎಸ್. ಸಿದ್ಧರಾಮಯ್ಯ
ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ
ಡಾ. ಸಿ.ಟಿ. ಜಯಣ್ಣ

ಪ್ರಕಾಶಕರು
ಅಲ್ಲಮಪ್ರಭು ಸಂಶೋಧನ ಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ
ಶ್ರೀ ಮುರುಘಾಮಠ, ಚಿತ್ರದುರ್ಗ – ೫೭೭ ೫೦೨

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

೧೩. ದೈವ - ದೇವರು / ಶ್ರೀ ಬಸವಪ್ರಭು ಸ್ವಾಮಿಗಳು
೧. ಏಕದೇವೋಪಾಸನೆ, ೨. ಕೈಲಾಸ, ೩. ತ್ರಿಲಿಂಗ, ೪. ದಿವ್ಯಲೀಲೆ, ೫. ನಿಸ್ಸೀಮ, ೬. ಪ್ರಾರ್ಥನೆ, ೭. ಬಹುದೇವೋಪಾಸನೆ, ೮. ಮಹದೇವನೆಲ್ಲಿರುವ, ೯. ಶಿವ, ೧೦. ಸರ್ವವೂ ಶಿವನಲ್ಲ, ೧೧. ಸರ್ವಾಂತರ್ಯಾಮಿ (ಶಾಶ್ವತ ನೀನು), ೧೨. ಬಟ್ಟಬಯಲು, ೧೩. ದೇವರ ದೇವ, ೧೪. ದೇವನಿರವು, ೧೫. ದೇಹವೆಂಬುದು, ೧೬. ದೇವಲೋಕ ಮರ್ತ್ಯಲೋಕ, ೧೭. ದೇವನು ಒಳ್ಳೆಯವನೆ?, ೧೮. ದೇವನೊಲುಮೆಯ ದಾರಿ, ೧೯. ದೇವರಿಗೇಕೆ ತಾರತಮ್ಯ?, ೨೦. ದೇವರಿಗೆ ಮಾತಾಪಿತರಿಲ್ಲ, ೨೧. ದೇವನಿಂತಹವರಲ್ಲಿ ಇರುವ, ೨೨. ದೇವರು ವಿನೋದಿಸಿದ, ೨೩. ದೇವರ ನಿಲುವು, ೨೪. ದೇವ-ದೇಗುಲ /೩೯೮

೧೪. ಧರ್ಮ / ಡಾ. ರಂಜಾನ್ ದರ್ಗಾ /೪೧೯

೧೫. ನಿಸರ್ಗ / ಡಾ. ಸಿದ್ದರಾಮ ಶರಣರು ಬೆಲ್ದಾಳ
೧. ಜೀವನದಲ್ಲಿ ದೇವನಿರವು, ೨. ಮರವೆಯ ಮಾನವಗೆ ಅರಿವಿನ ಮಾರ್ಗ, ೩. ಬಯಸಿದರೆ ಸುಖಬಾರದು, ೪. ದೇವನಲ್ಲದೆ ಯಾರೂ ಇಲ್ಲ, ೫. ಹೊಣೆ ಹೊತ್ತವರು ತಪ್ಪಿದರೆ?, ೬. ಚಂಚಲ ಮನದ ಸಂಚಲನದ ಪರಿ, ೭. ಮನವ ನಂಬಿದಲ್ಲಿ ನಷ್ಟವುಂಟು, ೮. ಭೋಗಾಸಕ್ತಿ ಯೋಗಾಸಕ್ತಿ, ೯. ಅಂಗವೆ ಲಿಂಗ ಬೆಳೆವ ಭೂಮಿ, ೧೦. ವಿಷಯರಹಿತನ ಮಾಡು, ೧೧. ದೇವನೇ ಗತಿ, ೧೨. ಸಮರ್ಪಣೆ ಅಥವಾ ಶರಣಾಗತಿ, ೧೩. ದಾರಿ ತಪ್ಪಿದ ಜೀವಕರು, ೧೪. ಮಹಾಘನವೆ ಮೂಲ, ೧೫. ಭಕ್ತಿಯ ಪಂಜರವೆ ಸುರಕ್ಷಿತ, ೧೬. ಅವಗುಣವನರಸದಿರು , ೧೭. ಶಿವನ ಸೇರಲು ಶರಣ ಸಂಗ ಬೇಕು, ೧೮. ಶರಣರಿಗೆ ವಿಭೂತಿ ಶೃಂಗಾರ, ೧೯. ಮಹಾನಾಮದ ಮಹಿಮೆ, ೨೦. ಭಾವದಲ್ಲಿ ಬೇಡ ಭ್ರಮೆ, ೨೧. ಅಜ್ಞಾನಿ ಅನಾಚಾರಿಗೆ ದೀಕ್ಷೆ ಸಲ್ಲದು, ೨೨. ಸದಾಚಾರವಿಲ್ಲದ ಸದ್ಭಕ್ತನಾಗನು, ೨೩. ನಿಷ್ಠೆ ಇಲ್ಲದ ಭಕ್ತಿ ನಿಜವಲ್ಲ, ೨೪. ಅಂಧಾನುಕರಣೆ ಸಲ್ಲ, ೨೫. ಶರಣರ ಸಂಗದ ಹಿರಿಮೆ, ೨೬. ಕೆಡುವ ಕಾಯ ಸ್ಥಿರವಲ್ಲ, ೨೭. ಅಳಿವ ಕಾಯವ ನಂಬದಿರು, ೨೮. ಒತ್ತಾಯದ ಬೇಡಿಕೆ ತರವಲ್ಲ, ೨೯. ಶರಣರ ವಚನಾಮೃತ, ೩೦. ಅಂಧಭಕ್ತಿಗೆ ಅರ್ಥವಿಲ್ಲ, ೩೧. ಶರಣರಿಗೆ ತಾನು ಸಮವಲ್ಲ, ೩೨. ಶರಣರ ಮುಂದೆ ತಾನೇತರ ಭಕ್ತ?, ೩೩. ಶರಣರ ಬರವು ಪ್ರಾಣ ಜೀವಾಳ, ೩೪. ಸತ್ಯ ಶರಣರನ್ನು ಸಂತೃಪ್ತಗೊಳಿಸು, ೩೫. ಸದ್ಭಕ್ತರಲ್ಲದವರಲ್ಲಿ ಸಂಭಾಷಣೆ ಬೇಡ, ೩೬. ಶುದ್ಧ ಧ್ಯಾನದಿಂದ ದೇವನನ್ನರಿದೆ, ೩೭. ಶರಣರು ಮಾತಾಡಿದರೆ ಲಿಂಗವೆ, ೩೮. ಬಯಲು ಬಾಯ್ದೆರೆದರೆ?, ೩೯. ಮಡಿ ಮಾಡಿದ ಮಡಿವಾಳ, ೪೦. ಪರಶಿವವೆ ನಿಜದೇವರು, ೪೧. ಸತ್ಯ ಶರಣರೆ ಸತ್ಸಂಪತ್ತು, ೪೨. ಮಾಡುವುದು ಮಾಡಿಸಿಕೊಂಬುದು ಒಂದೇ ವಸ್ತು, ೪೩. ಮಹಾಬಯಲ ಹಿಡಿಯಲಾಗದು, ೪೪. ಮನವ ಗೆದ್ದ ಮಹಾಂತ ಜಂಗಮ, ೪೫. ಶಿವಭಾವ ಮರೆತ ಜೀವ, ೪೬. ಮರವೆಯ ಮಾಯೆಯಿಂದ ಸುಖವಿಲ್ಲ, ೪೭. ಶರಣರು ವಾಯುವಳಿದು ಶಿವನಾದರು, ೪೮. ಪಂಚ ಪದಾರ್ಥ, ಪರಮ ಪ್ರಸಾದ, ೪೯. ಲಿಂಗಾಂಗ ಸಮರಸ ಸುಖ, ೫೦. ಶಿವಯೋಗ ಸಾಮಾನ್ಯರಿಗೆ ಸಾಧಿಸದು, ೫೧. ಅಜ್ಞಾನ ಮಾಯೆ ಅಳಿಯದೆ ಅವಗುಣ ಅಳಿಯವು, ೫೨. ಭೂಮಿಯ ಬದುಕು ಶಿವ ಪದಕೆ ಆಶ್ರಯ, ೫೪. ಅಂತರಂಗದ ತಾಪ ಜಗವನೆಲ್ಲ ಹರಡಿತ್ತು, ೫೫. ಶರಣ ಲಿಂಗ ಸಮರಸ ನಿಶ್ಶಬ್ದ, ೫೬. ಮಹಾಘನದಲ್ಲಿ ತನ್ನ ಮರೆದ ಮಹಂತ, ೫೭. ಮಹಾಘನಕ್ಕೆ ಒಡೆಯನಿಲ್ಲ, ೫೮. ಲಿಂಗ ನೆಲೆ ಬಲ್ಲವರಿಲ್ಲ, ೫೯. ಶರಣರ ನಿಲುವು ಕಾಣುವ ಕಾಲಕ್ಕೆ ಕಾಂಬುದು /೪೨೬

೧೬. ಪಾಪ - ಪುಣ್ಯ / ಡಾ. ಸಿಟಿ. ಜಯಣ್ಣ /೪೪೪

ಸೂತಕ /೪೪೭

೧೭. ಬಂಧನ - ಬಿಡುಗಡೆ / ಡಾ. ಟಿ.ಆರ್. ಚಂದ್ರಶೇಖರ್
೧. ಮಾಯೆ, ೨. ಬದುಕನ್ನು ಪಕ್ವವನ್ನಾಗಿ ಮಾಡಿಕೊಳ್ಳುವುದೇ ಬಿಡುಗಡೆ, ೩. ಒಡಲು-ಒಡವೆ, ೪. ವ್ರತಾಚರಣೆ ಮತ್ತು ಬಿಡುಗಡೆ, ೫. ಭವಿತನದ ಮೀಮಾಂಸೆ, ೬. ತನ್ನ ಸಾಧನೆಯೇ ತನ್ನ ಬಿಡುಗಡೆಯ ಮಾರ್ಗ, ೭. ಘಟ್ಟಿವಾಳಯ್ಯನ 'ಇಲ್ಲಾ ಇಲ್ಲ' ಪ್ರಣಾಳಿಕೆ /೪೪೯

# ಪಾಪ - ಪುಣ್ಯ

ಡಾ. ಸಿ.ಟಿ. ಜಯಣ್ಣ

ಪಾಪ-ಪುಣ್ಯಗಳ ಬಗ್ಗೆ ಅನಾದಿ ಕಾಲದಿಂದಲು ಚರ್ಚೆ, ಜಿಜ್ಞಾಸೆಗಳು ನಡೆಯುತ್ತ ಬಂದಿದೆ. ಎಲ್ಲ ಧರ್ಮಗಳಲ್ಲು ಪಾಪ ಪುಣ್ಯಗಳ ಬಗ್ಗೆ ಸಾಕಷ್ಟು ಅರ್ಥ ವಿವರಣೆ ನೀಡಿದ್ದಾರೆ. ನಮಗೆ ಕಷ್ಟ ಬಂದಾಗ, ದುಃಖ ಒದಗಿದಾಗ ಅಯ್ಯೋ ಇದು ಯಾವ ಪಾಪದ ಫಲವೋ? ಎಂದು ಉದ್ಗರಿಸುತ್ತೇವೆ. ಅಂದರೆ ಪುಣ್ಯ ಕಾರ್ಯಗಳಿಂದ ಸುಖ, ಪಾಪ ಕಾರ್ಯಗಳಿಂದ ದುಃಖ. ಎಲ್ಲವೂ ಕರ್ಮಫಲ. ಪಾಪ ಮಾಡಿದವರಿಗೆ ನರಕ ಪುಣ್ಯ ಮಾಡಿದವರಿಗೆ ಸ್ವರ್ಗ ಸಿಗುತ್ತದೆ ಎಂಬುದು ಎಲ್ಲ ಧರ್ಮಗಳ ಜನರಲ್ಲಿರುವ ನಂಬಿಕೆ. ಸಮಾಜದಲ್ಲಿ ಪಾಪಕೃತ್ಯವೆಸಗಿದವರನ್ನು ಶಿಕ್ಷೆಗೆ ಗುರಿಪಡಿಸಿದರೂ ತಿಳಿವಿನ ಹಾದಿಗೆ ಬರಲಾಗದಂಥ ಪರಿಸ್ಥಿತಿ ಇತ್ತು. ಇದನ್ನು ಗಮನಿಸಿದ ಬಸವಣ್ಣನವರು ಸನ್ನಿವೇಶನದ ಒತ್ತಡಕ್ಕೆ ಕೆಟ್ಟು ಹೋದವರಿಗೆ ಸತ್ ಸಹವಾಸ ಒದಗಿಸಿಕೊಟ್ಟು ಅಂತರಂಗದ ಶೋಧನೆಗೆ, ಪರಿತಾಪಕ್ಕೆ ಅವಕಾಶ ಕಲ್ಪಿಸಿದರೆ ಉದ್ಧಾರ ಸಾಧ್ಯವೆಂದು ಸಾರಿದರು. 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಅವ ಕೂಡಲಸಂಗಮದೇವ ನೋಡಾ' ಎಂದು ಅವನಲ್ಲೆ ಪ್ರಾಯಶ್ಚಿತ್ತ ಹಾಗು ಪಶ್ಚಾತ್ತಾಪ ಉಂಟಾಗುವಂತೆ ಮಾಡಿ ಉದ್ಧಾರದ ಮಾರ್ಗವಿದೆ ಎಂದು ಘೋಷಿಸಿದರು. ಅವರ ವಚನ ಸಾಹಿತ್ಯ ಕೇವಲ ಬೌದ್ಧಿಕ ವಿಚಾರದ ಪರಿಣಾಮವಲ್ಲ, ಕೇವಲ ಮಾನಸಿಕ ಆಲೋಚನೆಯ ರೂಪ ಅಲ್ಲ. ಮಾನವನ ಬಾಳಿನ ಎಲ್ಲ ಪಾಪ - ತಾಪಗಳನ್ನು ಕಳೆದು ಜೀವತ್ವದಿಂದ ದೇವತ್ವದೆಡೆಗೆ ಒಯ್ಯಬಲ್ಲ ದಿವ್ಯ ಸಾಧನೆ. ಅಂಥ ವಚನಗಳ ಮೂಲಕ ಬಸವಣ್ಣನವರು ಪಾಪ ಪುಣ್ಯದ ಬಗ್ಗೆ ತಮ್ಮ ವಿಚಾರಗಳನ್ನು ಅಂತರಂಗಕ್ಕೆ ಮುಟ್ಟುವಂತೆ ಹೇಳಿದ್ದಾರೆ.

ಎಲ ಎಲವೋ ಪಾಪ-ಕರ್ಮವ ಮಾಡಿದವನೇ
ಎಲವೋ ಎಲವೋ ಬ್ರಹ್ಮೇತಿಯ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ?
ಒಮ್ಮೆ ಶರಣೆಂದಡೆ ಪಾಪ-ಕರ್ಮ ಓಡುವವು
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು
ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ

ಪುಣ್ಯ, ಪಾಪಂಗಳೆಂಬವು ತಮ್ಮ ಇಷ್ಟ ಕಂಡಿರೆ
ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ
ದೇವಾ, ಭಕ್ತಾ, ಜಯ ಎಂಬ ನುಡಿಯೊಳಗೆ
ಕೈಲಾಸವೈದುವುದೆ ಕೂಡಲಸಂಗಮದೇವಾ.

ಒಬ್ಬರ ಮನನೋಯಿಸುವ ಎಲವೋ ಎ... ದುರಂಹಕಾರದ ಮಾತಿನಿಂದ ಅನ್ಯರ ಮನಸ್ಸನ್ನು ನೋಯಿ... ಬಾರದು. ಅಯ್ಯಾ ಎಂಬ ವಿನಯಪೂರಿತ ಮಾತು ... ಅದೇ ಸ್ವರ್ಗ ಎನ್ನುತ್ತಾರೆ ಬಸವಣ್ಣನವರು. ಶಿವಕಾರು... ವೊಂದಿದ್ದರೆ ಎಲ್ಲರೂ ಧನ್ಯರೆ. ಶಿವನೊಲಿಯಬೇಕಾದ... ಪುಣ್ಯಾರ್ಜನೆ ಮಾಡಬೇಕಾದರೆ ಒಳ್ಳೆಯ ಕೆಲಸ ಮಾಡಬೇ...

ನೀನೊಲಿಯಿತ್ತೆ ಪುಣ್ಯ, ನೀನೊಲ್ಲದುದೆ ಪಾಪ
ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ
ನೀನೊಲಿದವನೆ ನಿಮ್ಮನರಿದವನು
ಪ್ರಸಾದಾದ್ದೇವತಾಭಕ್ತಿಃ ಪ್ರಸಾದೋ ಭಕ್ತಿಸಂಭವಃ
ಯಥೈವಾಂಕುರತೋ ಬೀಜಂ ಬೀಜತೋ ...
ಯಥಾಂಕುರಃ
ನೀನೊಲಿದವನೆ ಧನ್ಯ, ಜಗಕ್ಕೆ ಪಾವನ ಕೂಡಲಸಂಗಮದೇ...

ಸಮಚಿತ್ತರಾದ ಬಸವಣ್ಣನವರ ಉಪದೇಶವಿದು.

ಸುಖ ಬಂದಡೆ ಪುಣ್ಯದ ಫಲವೆನ್ನೆನು
ದುಃಖ ಬಂದಡೆ ಪಾಪದ ಫಲವೆನ್ನೆನು
ನೀ ಮಾಡಿದಡಾಯಿತ್ತೆಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೆ
ಪರಿಯಲ್ಲಿ
ಸಂಸಾರವ ಸವೆಯೆ ಬಯಸುವೆನು